ಪಕ್ಷದವರಾದ ಕುಂಬ್ಳೆಯರುವ ರಾಮನಾಗಿ ನಟಿಸುವಾಗ ಆಗುವ ಅರ್ಥವ್ಯತ್ಯಾಸಗಳತ್ತ ಲೇಖಕರು ನಮ್ಮ ಗಮನ ಸೆಳೆಯುತ್ತಾರೆ, ಪ್ರಸಂಗದ ಅರ್ಥವೂ ರಾಮನ ಪಾತ್ರದ ಅರ್ಥ, ಮಹತ್ವಗಳೂ ಸಂದರ್ಭ ಬದ್ಧ, ರಾಜಕೀಯ ಬದ್ಧವೆಂದು ನಿರೂಪಿಸುತ್ತಾರೆ.

ಕಲೆಯ ಭಾಷೆ ಅಥವಾ ಭಾಷೆಯ ಶಕ್ತಿ ಇರುವುದು ಎದುರಿನವರನ್ನು ಮಣಿಸುವುದರಲ್ಲಿ ಅಥವಾ ಶರಣಾಗುವುದರಲ್ಲಿ ಅಲ್ಲ. ಟಾಗೋರ್, ಗಾಂಧಿ, ಅಂಬೇಡ್ಕರ್‌ರಂಥವರು 'ತಮ್ಮ ಮಾತಿನ ಸಾಧ್ಯತೆಯನ್ನು ಶೋಧಿಸಲು, ಎದುರಿಗೆ ಇರುವವರ ಭಿನ್ನವಾದ ಮಾತನ್ನು ಅರ್ಥಮಾಡಿಕೊಳ್ಳಲು, ತಮಗೆ ಸಂಪೂರ್ಣವಾಗಿ ಅಪರಿಚಿತವಾದ ಅನುಭವವನ್ನು ತಮ್ಮ ತೆಕ್ಕೆಗೆ ತಂದಕೊಳ್ಳಲು' ಭಾಷೆಯನ್ನು ಬಳಸಿದರು. ಸತ್ಯ– ಸುಳ್ಳುಗಳ ಅಂತರ ಅಳಿಸಿ ಅಧಿಕಾರ ಸಂಪಾದನೆಗೆ ದ್ವೇಷ ಹುಟ್ಟಿಸಲು, ಆಕ್ರೋಶ ಕೆರಳಿಸಲು ಬಳಸುವ ಭಾಷೆ ಅಳವಿಲ್ಲದ ಭಾಷೆ ಎಂಬುದನ್ನು ಈ ಪುಸ್ತಕ ಮನಗಾಣಿಸುತ್ತದೆ. 'ಭರತಪದ'ವೆಂಬ ಏಳನೆಯ ಮತ್ತು ಕೊನೆಯ ಅಧ್ಯಾಯ ಅಡಿಗರ ಕವಿತೆಯನ್ನು ಬಳಸಿಕೊಂಡು ಭಾಷೆಯ, ಕಲೆಗಳ ಸಾಧ್ಯತೆಯತ್ತ ಗಮನ ಸೆಳೆಯುತ್ತದೆ.

ಸುಮಾರು ಹನ್ನೆರಡು ಪುಟಗಳಷ್ಟು ವಿಸ್ತಾರವಾಗಿರುವ ಅನುಬಂಧವು ಕನ್ನಡ, ಇಂಗ್ಲಿಷ್ ಪುಸ್ತಕ, ಪ್ರಬಂಧಗಳು ಮಾತ್ರವಲ್ಲದೆ ಯಕ್ಷಗಾನದ ವೀಡಿಯೊ, ಅಂತರ್ಜಾಲತಾಣ ಮೊದಲಾದ ಆಕರಗಳನ್ನು ಉಲ್ಲೇಖಿಸಿವೆ. ಆ ಎಲ್ಲ ಮಾಹಿತಿಯನ್ನು ಅರಗಿಸಿಕೊಂಡು ಓದುಗರಿಗೆ ಶ್ರಮವಾಗದ ಸುಲಲಿತ ಕಥನವನ್ನು ರೂಪಿಸಿರುವುದು ಮೆಚ್ಚುಗೆಗೆ ಅರ್ಹವಾದ ಸಂಗತಿ.

ಸಂಸ್ಕೃತಿ ಅಧ್ಯಯನದ ಹೆಸರಿನಲ್ಲಿ ಪ್ರಕಟವಾಗುವ ಅನೇಕ ಕನ್ನಡ ಬರಹಗಳು ನಿರ್ಜೀವ, ನೀರಸ, ಯಾಂತ್ರಿಕವಾಗಿರುತ್ತವೆ.

1. ಸಮಕಾಲೀನ ವಿದ್ಯಮಾನವನ್ನು ಸಮಾಜಶಾಸ್ತ್ರ, ಚರಿತ್ರೆ, ಕಲೆ, ಭಾಷೆ, ರಾಜಕೀಯ, ಹೀಗೆ ವಿವಿಧ ಕೋನಗಳಿಂದ ಪರಿಶೀಲಿಸುವುದು.
2. ಚಾರಿತ್ರಿಕ, ವಿದ್ವತ್‌ಪೂರ್ಣ ದಾಖಲೆಗಳಲ್ಲದೆ ಸ್ಮೃತಿಯನ್ನೂ ಕಥನಗಳನ್ನೂ ಒಳಗೊಂಡಿರುವುದು.
3. ಹರಿತ ಮತ್ತು ಖಚಿತ ವಿಶ್ಲೇಷಣೆಯೊಡನೆ ಆತ್ಮಕಥೆಯ ಭಾಗವನ್ನೂ ಸೇರಿಸಿಕೊಂಡು, ಅನುಭವಗಳನ್ನೂ ವಿಶ್ಲೇಷಣೆ ಮಾಡುತ್ತ ಬಲು ಮಟ್ಟಿಗೆ ಕಥನದತ್ತ ಒಲವು ಇರುವ ಬರಹವನ್ನು ಮಾಡಿರುವುದು.
4. ಸದ್ಯದ ಪರಿಸ್ಥಿತಿಯಲ್ಲಿ ಅಂಜಿಕೆ, ಅಳುಕು ಇಲ್ಲದೆ ತಮ್ಮ ನಿಲುವನ್ನು ಮಂಡಿಸಿರುವುದು.
5. ವಿದ್ವಾಂಸರಿಗಾಗಿ ಮಾತ್ರವಲ್ಲದೆ ಸಾಮಾನ್ಯ ಓದುವಿಕೆಯಲ್ಲಿ ತೊಡಗುವ ಓದುಗರಲ್ಲೂ ವಿಚಾರದ ಅಲೆಗಳನ್ನು ಎಬ್ಬಿಸಬಲ್ಲ ನಿರೂಪಣೆ ಸಾಧ್ಯವಾಗಿರುವುದು – ಈ ಕಾರಣಗಳಿಗಾಗಿ ಈ ಪುಸ್ತಕ ನನಗೆ ಮಹತ್ವಾಗಿ ಕಂಡಿದೆ. ನಿತ್ಯಾನಂದ. ಶೆಟ್ಟಿ ಅವರ 'ಅಳವು ಅರಿಯದ ಭಾಷೆ' ಮತ್ತು ಸಂಕೇತ ಇತ್ತೀಚೆಗೆ ಸಂಕೇತಪಾಟೀಲ್ ಅನುವಾದಿಸಿದ 'ಅಲೆಮಾರಿಗಳು, ಅರಸರು ಮತ್ತು ವರ್ತಕರು' ಇವೆರಡೂ ಪುಸ್ತಕಗಳು ಕನ್ನಡದಲ್ಲಿ ಬಹಳ ಅಪರೂಪವಾಗುತ್ತಿರುವ ಘನವಾದ ಪುಸ್ತಕಗಳು, ಕನ್ನಡಕ್ಕೆ ಶಕ್ತಿಯನ್ನು ತುಂಬುವ ಕೃತಿಗಳು.

ಶಂಬಾ, ಡಿವಿಜಿ, ದೇವುಡು,ಮಾಸ್ತಿ, ಡಿ.ಆರ್. ನಾಗರಾಜ್, ತೇಜಸ್ವಿ, ಲಂಕೇಶ್, ರಹಮತ್ ತರೀಕೆರೆ, ಲಕ್ಷ್ಮೀಪತಿಯವರಂಥ ಚಿಂತಕರು, ಕುರ್ತಕೋಟಿ, ಕೆ.ವಿ. ನಾರಾಯಣ, ಕಲ್ಗುಡಿ, ಸತ್ಯನಾಥ್ ಇಂಥ ವಿದ್ವಾಂಸರು ಸಂಸ್ಕೃತಿಯನ್ನು ಕಂಡ ರೀತಿಯೂ ಓದುಗರಿಗೆ ಪರಿಚಿತವಾಗಿದೆ. ಇವೆಲ್ಲಕ್ಕಿಂತ ಬೇರೆಯದೇ ರೀತಿಯಲ್ಲಿ ಶಬ್ದದ ಶಕ್ತಿ, ಶಬ್ದದ ಲಜ್ಜೆ, ಶಬ್ದಸೂತಕ ಇವೆಲ್ಲವೂ ಎದ್ದು ಕಾಣುವ ಹಾಗೆ, ನಿರ್ದಿಷ್ಟ ಭೌಗೋಳಿಕ ವ್ಯಾಪ್ತಿಯ ಚೌಕಟ್ಟಿನೊಳಗೆ ನಿರ್ದಿಷ್ಟವಾದೊಂದು ಕಲೆ, ಕಲಾವಿದರನ್ನು ನಿದರ್ಶನವಾಗಿರಿಸಿಕೊಂಡು ಸಂಸ್ಕೃತಿ, ಕಲೆ, ಸಮಾಜ, ಇತಿಹಾಸಗಳ ಕಥನವನ್ನು ಹೇಗೆ ರೂಪಿಸಬಹುದು ಎಂಬ ಸಾಧ್ಯತೆಯನ್ನು ನಿತ್ಯಾನಂದ ಶೆಟ್ಟಿಯವರ ಕೃತಿ ತೋರಿಸಿಕೊಟ್ಟಿದೆ. ●